ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಇವರ ನ್ಯಾಯಾಲಯ, ಮೂಡಿಗೆರೆ.

ಸಿ.ಸಿ. ಸಂಖ್ಯೆ.63/2025

| | | |
|---|---|---|
| ಸಾಕ್ಷಿದಾರರ ಹೆಸರು | ಅಭಿಲಾಶ್ | ಸಿ.ಡಬ್ಲ್ಯೂ: 4 ಪಿ.ಡಬ್ಲ್ಯೂ: 3 |
| ತಂದೆಯ ಹೆಸರು | ಪ್ರಕಾಶ್ | |
| ವಯಸ್ಸು | 34 ವರ್ಷ | |
| ಉದ್ಯೋಗ | ಪೊಲೀಸ್ ಪೇದೆ, ಸಿ.ಆರ್. ಮೈಸೂರು | |
| ವಾಸ ಸ್ಥಳ | ಮೈಸೂರು | |

ದಿನಾಂಕ: 18.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ ಸ.ಸ.ಅ.ರವರಿಂದ:**

1. ನಾನು ನವೆಂಬರ್ 2021 ರಿಂದ 2024 ಸೆಪ್ಟಂಬರ್ ರವರೆಗೂ ನಾನು ಮೂಡಿಗೆರೆ ಸರ್ಕಲ್ ನಲ್ಲಿ 112 ಚಾಲಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ.
2. ನಾನು ಮತ್ತು ಚಾಸಾ.1 ರವರು ದಿ: 16.05.2024 ರಂದು ರಾತ್ರಿ 11.53 ರ ಸಮಯಕ್ಕೆ ಮರೆಬೈಲು ಗ್ರಾಮದಿಂದ ನಾಗಲಕ್ಷ್ಮೀ ಎಂಬುವವರು ಗಲಾಟೆಯಾಗುತ್ತಿದೆ ಎಂದು control room ಗೆ ಕರೆ ಮಾಡಿದ್ದು, control room ನಿಂದ ನಮಗೆ ದೂರಿನ ಬಗ್ಗೆ ಮಾಹಿತಿ ಬಂದ ಮೇರೆಗೆ ನಾನು ಮತ್ತು ಚಾಸಾ.1 ರವರು 112 ವಾಹನದಲ್ಲಿ ಮರೆಬೈಲು ಗ್ರಾಮಕ್ಕೆ ಹೋದೆವು. ಚಾಸಾ.1 ರವರು ಗಾಡಿಯಿಂದ ಕೆಳಗೆ ಇಳಿದರು, ನಾನು ಗಾಡಿಯನ್ನು ತಿರುಗಿಸಲು 100 ಮೀಟರ್ ಮುಂದೆ ಹೋದೆ. ಚಾಸಾ.1 ರವರು ಚಾಸಾ.4 ನಾಗಲಕ್ಷ್ಮೀ ಮತ್ತು ಆರೋಪಿಯನ್ನು ವಿಚಾರಣೆ ಮಾಡುತ್ತಿದ್ದಾಗ, ಚಾಸಾ.1 ರವರು ಕೂಗಿಕೊಂಡರು. ನಾನು ತಕ್ಷಣ ಏನು ಆಯಿತು ಎಂದು ಬಂದು ನೋಡಲಾಗಿ 2 ½ – 3 ಅಡಿ ಕಟ್ಟೆಯಿಂದ ಆರೋಪಿ ಕತ್ತಿಯನ್ನು ತೆಗೆದ ಕಾರಣ ಚಾಸಾ.1 ರವರು ಕಟ್ಟೆಯಿಂದ ಕೆಳಗೆ ಬಿದ್ದೆ ಎಂದು ಚಾಸಾ.1 ರವರು ನನಗೆ ತಿಳಿಸಿದರು.

3. ಆರೋಪಿಗೆ ತಿಳುವಳಿಕೆಯನ್ನು ಹೇಳಿದರು ಕೇಳದ ಕಾರಣ ಚಾಸಾ.5 ಮತ್ತು 6 ರವರನ್ನು ಪಕ್ಕದ ಮನೆಯಲ್ಲಿ ಬಿಟ್ಟು ನಾವು ನಡೆದ ಘಟನೆಯ ಬಗ್ಗೆ ತಿಳಿಸಲು ಗೋಣಿಬೀಡು ಪೊಲೀಸ್ ಠಾಣೆಗೆ ಹೋಗಿದ್ದೆವು. ಚಾಸಾ.1 ರವರ ಕಾಲಿಗೆ ಏಟಾಗಿತ್ತು. ಬೇರೆ ವಿಚಾರ ನನಗೆ ನೆನಪಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಸ.ಸ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)**

ಪಾಟೀ ಸವಾಲು ಃ ಮಾನ್ಯ ಸ.ಸ.ಅ ರವರಿಂದ

4. ಆರೋಪಿ ತನಗೆ ಬೈದರು ಎಂದು ಚಾಸಾ.1 ರವರು ನನಗೆ ತಿಳಿಸಿದ್ದರು ಎಂದರೆ ಸರಿ. ಆರೋಪಿ ವಿಫರೀತ ಮದ್ಯಪಾನ ಮಾಡಿದ್ದರು ಎಂದರೆ ಸರಿ. ಆರೋಪಿ ಚಾಸಾ.1 ರವರಿಗೆ ಕೇಳಲು ನೀನು ಯಾರು ಎಂದು ಅವರ ಕರ್ತವ್ಯಕ್ಕೆ ಅಡ್ಡಿ ಪಡಿಸಿದ್ದರು ಎಂದರೆ ಸರಿ. ಚಾಸಾ.1 ರವರು ತಮಗೆ ಆದ ಗಾಯಗಳಿಗೆ ಮೂಡಿಗೆರೆಯ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದರು ಎಂದರೆ ಸರಿ. ಚಾಸಾ.1 ರವರು ಗೋಣಿಬೀಡು ಪೊಲೀಸ್ ಠಾಣೆಗೆ ಘಟನೆಯ ಬಗ್ಗೆ ದೂರನ್ನು ನೀಡಿದ್ದರು ಎಂದರೆ ಸರಿ. ಆರೋಪಿ ಚಾಸಾ.1 ರವರಿಗೆ ಕತ್ತಿಯಿಂದ ಹೊಡೆದು ಕೊಲೆ ಮಾಡುತ್ತೇನೆ ಎಂದು ಕೊಲೆ ಬೆದರಿಕೆ ಹಾಕಿದ್ದರು ಎಂದರೆ ಸಾಕ್ಷಿ ಚಾಸಾ.1 ರವರು ಆ ಬಗ್ಗೆ ನನಗೆ ತಿಳಿಸಿದ್ದರು ಎಂದು ನುಡಿಯುತ್ತಾರೆ. ಆ ದಿನ ಸ್ಥಳದಲ್ಲಿ ಇದ್ದ ಆರೋಪಿ ಈ ದಿನ ನ್ಯಾಯಾಲಯದ ಮುಂದೆ ಹಾಜರಿರುತ್ತಾರೆ. ನ್ಯಾಯಾಲಯದ ಮುಂದಿರುವ ಮು.ಮಾ.1 ಕತ್ತಿಯಿಂದಲೇ ಆರೋಪಿ ಚಾಸಾ.1 ರವರಿಗೆ ಬೆದರಿಕೆ ಹಾಕಿದ್ದರು ಎಂದರೆ ಸರಿ. ಎಲ್ಲಾ ವಿಚಾರಗಳು ನನಗೆ ತಿಳಿದಿದ್ದರು ಕರ್ತವ್ಯದ ಒತ್ತಡದಿಂದ ಕೆಲವೊಂದು ವಿಚಾರವನ್ನು ಮರೆತಿದ್ದೇನೆ ಎಂದರೆ ಸರಿ.

ಪಾಟೀ ಸವಾಲು - ಶ್ರೀ ಹೆಚ್.ಕೆ.ಆರ್ ಆರೋಪಿ ಪರ ವಕೀಲರಿಂದ

5. ದಿಃ 16.05.2024 ರಂದು ನಾವು ಕರ್ತವ್ಯಕ್ಕೆ control room ರವರಿಗೆ ವರದಿಯಾಗಿದ್ದು, ಅವರು ಹಾಕಿದ್ದ event ಮೇಲೆ ನಾವು ಕರ್ತವ್ಯವನ್ನು ನಿರ್ವಹಿಸುತ್ತಿದ್ದೆವು. ಆ ದಿನ ನಾವು ಮೂಡಿಗೆರೆ ಮತ್ತು ಗೋಣಿಬೀಡು ವ್ಯಾಪ್ತಿಗಳಲ್ಲಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದೆವು. ಘಟನೆಯ ಮಾಹಿತಿ

ಬಂದಾಗ ನಾವು ಮೂಡಿಗೆರೆ ಸರ್ಕಲ್ ನಲ್ಲಿ ಇದ್ದೆವು. ಆ ದಿನ ನೀವು ಕರ್ತವ್ಯಕ್ಕೆ ನಿಯೋಜನೆಗೊಂಡ ಬಗ್ಗೆ ಸಹಿಯನ್ನು ಎಲ್ಲಿ ಮಾಡಿದ್ದೀರಿ ಎಂದರೆ ಸಾಕ್ಷಿ ನಾವು ಕರ್ತವ್ಯಕ್ಕೆ ವರದಿ ಮಾಡಿಕೊಂಡ ಬಳಿಕ ಸೆಪ್ಟಂಬರ್ 2021 ರಂದು ಸಹಿ ಮಾಡಿದ್ದು ಅದು ನಿರಂತರವಾಗಿ ಚಾಲ್ತಿಯಲ್ಲಿ ಇರುತ್ತದೆ, ಪದೇ ಪದೇ ಸಹಿ ಮಾಡುವುದಿಲ್ಲ ಎಂದು ನುಡಿಯುತ್ತಾರೆ. ಮಾಹಿತಿ ಬಂದ ರಾತ್ರಿ 11.53 ಕ್ಕೆ ನಾವು ಹೊರಟು 12.10 ಕ್ಕೆ ಸ್ಥಳಕ್ಕೆ ತಲುಪಿರುತ್ತೇವೆ.

6. ಮೂಡಿಗೆರೆಯಿಂದ ಮರೆಬೈಲು ಅಂದಾಜು ಎಷ್ಟು ಕಿಮೀ ಅಂತರದಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ. ಮಾಹಿತಿ ಬಂದ ನಂತರ ನೇರವಾಗಿ ಸ್ಥಳಕ್ಕೆ ಹೋದೆವು. ನೀವು ವಾಹನವನ್ನು ನಿಲ್ಲಿಸಿ ಬರುವಷ್ಟರಲ್ಲಿ ಚಾಸಾ.1 ರವರು ನಿಮ್ಮ ಬಳಿಗೆ ಬಂದು ಮಾಹಿತಿಯನ್ನು ತಿಳಿಸಿದರಾ ಎಂದರೆ ಸಾಕ್ಷಿ ಚಾಸಾ.1 ರವರು ಕೂಗಿಕೊಂಡ ಶಬ್ದವನ್ನು ಕೇಳಿ ನಾನು ಸ್ಥಳಕ್ಕೆ ಹೋದೆ ಎಂದು ನುಡಿಯುತ್ತಾರೆ. ನಾನು ಸ್ಥಳಕ್ಕೆ ಹೋದ ಬಳಿಕ ಅಲ್ಲಿ ನಡೆದ ವಿಚಾರ ನನಗೆ ತಿಳಿಯಿತು. ನಾನು ವೈಯಕ್ತಿಕವಾಗಿ ಅಲ್ಲಿ ನಡೆದ ವಿಚಾರವನ್ನು ನೋಡಲಿಲ್ಲ. ನಾನು ಸ್ಥಳಕ್ಕೆ ಹೋದಾಗ ಆರೋಪಿ ಮತ್ತು ಚಾಸಾ.5 ರವರನ್ನು ನೋಡಿದ್ದೆ. ಆರೋಪಿ ಮನೆಯ ಅಕ್ಕಪಕ್ಕದಲ್ಲಿ ಎಷ್ಟು ಮನೆ ಇವೆ ಎಂದು ನಾನು ನೋಡಲಿಲ್ಲ. ಘಟನೆ ನಡೆದ ಬಳಿಕ ನಾವು ಮೊದಲು ದೂರವಾಣಿ ಮೂಲಕ ವಿಚಾರವನ್ನು ತಿಳಿಸಿ ಠಾಣೆಗೆ ಹೋಗಿ ನಂತರ ಆಸ್ಪತ್ರೆಗೆ ಹೋಗಿದ್ದೆವು.

7. ಚಾಸಾ.1 ರವರು ಎಷ್ಟು ಗಂಟೆಗೆ ದೂರನ್ನು ನೀಡಿದ್ದರು ಎಂದು ನೆನಪಿಲ್ಲ. ಚಾಸಾ.1 ರವರನ್ನು ನಮ್ಮ ವಾಹನದಲ್ಲಿಯೇ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆ, ಸಮಯ ನೆನಪಿಲ್ಲ. ಚಾಸಾ.1 ರವರ ಕಾಲು ಉಳುಕಿ, ಊತ ಆಗಿತ್ತು. ಆ ದಿನ ನಾನು ಮತ್ತು ಚಾಸಾ.1 ಕರ್ತವ್ಯದಲ್ಲಿ ಇರಲಿಲ್ಲ ಮತ್ತು ಸ್ಥಳಕ್ಕೆ ಹೋಗಿಲ್ಲ, ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ನಾನು ಕತ್ತಿಯನ್ನು ನೋಡಿಲ್ಲ ಎಂದರೆ ಸರಿಯಲ್ಲ. ಆ ಕತ್ತಿಯ ಅಂಚು ಮುರಿದಿತ್ತಾ ಇಲ್ಲವೋ ನನಗೆ ಗೊತ್ತಿಲ್ಲ. ಆರೋಪಿ ಚಾಸಾ.1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ. ಚಾಸಾ.1 ರವರು ದೂರು

ನೀಡುವಾಗ ನಾನು ಅವರ ಜೊತೆಯಲ್ಲಿ ಇದ್ದೆ. ದೂರಿನಲ್ಲಿ ಏನೆಲ್ಲಾ ವಿಚಾರಗಳು ಇದ್ದವು ಎಂದು ನನಗೆ ಗೊತ್ತಿಲ್ಲ. ನಾನು ಮತ್ತು ಚಾಸಾ.1 ಆಗಾಗ ಆರೋಪಿಯ ಮನೆಗೆ ಹೋಗಿ ಆತ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಾರೆ ಎಂದು ವಿಚಾರಿಸುತ್ತಿದ್ದೆವು ಎಂದರೆ ಸುಳ್ಳು. ಆರೋಪಿ ಆ ಸಮಯದಲ್ಲಿ ನಮಗೆ ಸರಿಯಾದ ಮಾಹಿತಿ ನೀಡದೇ ಸಹಕರಿಸುತ್ತಿರಲಿಲ್ಲದ ಕಾರಣ ಆತನ ಮೇಲೆ ಈ ಪ್ರಕರಣವನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನೀವು ಮತ್ತು ಚಾಸಾ.1 ಎಷ್ಟು ವರ್ಷದಿಂದ 112 ವಾಹನದಲ್ಲಿ ಕೆಲಸ ಮಾಡುತ್ತಿದ್ದೀರಿ ಎಂದರೆ ಸಾಕ್ಷಿ ಆಗಾಗ ಬದಲಾಗುತ್ತಿದ್ದರು ಎಂದು ನುಡಿಯುತ್ತಾರೆ. ಮು.ಮಾ.1 ಅನ್ನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸುಳ್ಳು. ಚಾಸಾ.1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ